

ಅರುಣ ಪಿ. ಭಟ್ಟ

## ವಾರದ ಭವಿಷ್ಯ 2.4.2020ರಿಂದ 8.4.2020ರವರೆಗೆ




ನಿಮ್ಮ ಮಾತಿನ ಜಾಣ್ಮೆ, ಸರಳವಾದ ನಡೆ ನುಡಿಗಳಿಂದ ಜನರ ಪ್ರಶಂಸೆ ಪಡೆಯಲು ಅನುಕೂಲ.ಆರ್ಥಿಕ ಸಮಸ್ಯೆ ಕಡಿಮೆ ಆಗುವುದು. ಕಚೇರಿ ಕೆಲಸ ಪ್ರಯತ್ನದಿಂದ ಶುಭ. ಚಿಕ್ಕ ಪ್ರವಾಸ, ಮನೆಯಲ್ಲಿ ಗೊಂದಲ ಪ್ರವೃತ್ತಿ.

ಶುಭದಿನ 3. ದೇವ್ಯಪರಾದ ಕ್ಷಮಾಪನ ಸ್ತೋತ್ರ ಪಠಣ ಮಾಡಿ.




ನಿರೀಕ್ಷಿತ ಅಧಿಕಾರ ಲಾಭ. ಅಧಿಕಾರಿಗಳಿಗೆ ಪದೋನ್ನತಿ. ಬರತಕ್ಕ ಹಣ ಬರುತ್ತದೆ. ಆರೋಗ್ಯವಾಗಿರುವಿರಿ. ಕೌಟುಂಬಿಕವಾಗಿ ಅಧಿಕ ಖರ್ಚು. ಕಣ್ಣಿನ ಸಮಸ್ಯೆ ಕಾಣಿಸುವದು. ದೈನಂದಿನ ವ್ಯವಹಾರಗಳಲ್ಲಿ ಏರಿಳಿತಗಳಾಗುತ್ತವೆ.

ಶುಭದಿನ 5. ರಾಘವೇಂದ್ರ ಸ್ವಾಮಿ ಭಜನೆ ಮಾಡಿರಿ.




ಬಹುದಿನಗಳ ಆಕಾಂಕ್ಷೆ ಪೂರ್ಣವಾಗುವುದು. ಕುಟುಂಬಸ್ಥರೊಡನೆ ಪ್ರವಾಸ. ಅರ್ಧಕ್ಕೆ ನಿಂತ ಮನೆಕೆಲಸ ಚಾಲನೆ ದೊರೆಯುವುದು. ಸಹೋದರರ ಸಹಾಯ. ಭಿನ್ನಾಭಿಪ್ರಾಯಗಳನ್ನು ಮರೆಯಲು ಪ್ರಯತ್ನ.

ಶುಭದಿನ 6. ವೆಂಕಟೇಶ್ವರ ಪ್ರಾರ್ಥನೆ ಮಾಡಿರಿ.




ವೈಯಕ್ತಿಕ ಬದುಕು ಉತ್ತಮವಾಗಲಿದೆ. ಶಿಕ್ಷಣದಲ್ಲಿ ಪ್ರಗತಿ. ಕ್ರೀಡೆ ಅಥವಾ ಸೇವಾ ಕ್ಷೇತ್ರದಲ್ಲಿ ತೊಡಗಿಕೊಂಡವರಿಗೆ ಪ್ರಗತಿ. ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಸೇವಾ ಭದ್ರತೆ. ಗೃಹ ನಿರ್ಮಾಣ ವಿಚಾರದಲ್ಲಿ ಪ್ರಗತಿ ಆಗಲಿದೆ.

ಶುಭದಿನ 8. ಹನುಮಾನ್ ಚಾಲಿಸ್ ಓದಿರಿ.




ಹಣಕಾಸಿನ ಸಂಸ್ಥೆಗಳ ಜತೆಗೆ ಒಪ್ಪಂದ ಸಾಧ್ಯತೆ. ವ್ಯವಹಾರಗಳನ್ನು ಬಲಪಡಿಸುವ ಸಲುವಾಗಿ ಹೆಚ್ಚು ಶ್ರಮ. ಇದರಿಂದ ನಿಮ್ಮಲ್ಲಿ ಉತ್ಸಾಹ ಮೂಡಲಿದೆ. ಈ ಬಲಪಡಿಸುವ ಪ್ರಕ್ರಿಯೆಯಲ್ಲಿ ಹೆಚ್ಚಿನ ಹಣವನ್ನು ಖರ್ಚು ಮಾಡಲಿದ್ದೀರಿ.

ಶುಭದಿನ 3. ಚಾಮುಂಡಿ ಸ್ತುತಿ ವನದುರ್ಗಾ ಆರಾಧನೆ ಮಾಡಿರಿ.




ಉದ್ಯೋಗದಲ್ಲಿ ಉತ್ತಮ ಸ್ಥಾನಮಾನ. ಸಹವರ್ತಿಗಳು ನಿಮ್ಮ ಯೋಜನೆಗೆ ಬೆಂಬಲಿಸುತ್ತಾರೆ. ಸಾಹಿತ್ಯ ಚಟುವಟಿಕೆಗಳಲ್ಲಿ ಉತ್ತಮ ಮನ್ನಣೆ. ಅದೃಷ್ಟದ ಭಾಗ್ಯಗಳು ಒದಗಿಬರಲಿದೆ. ದಾಂಪತ್ಯದಲ್ಲಿ ಪ್ರೀತಿಯ ಮನಃಸ್ಥಿತಿಯಿಂದ ಇರಲಿದ್ದೀರಿ.

ಶುಭದಿನ 7. ಸೌಂದರ್ಯ ಲಹರಿ ಪಠಿಸಿರಿ.




ಕೆಲಸ ಕಾರ್ಯಗಳಲ್ಲಿ ಆಗುತ್ತಿರುವ ಪ್ರಗತಿ ಬಗ್ಗೆ ತೃಪ್ತಿ. ನಿಮ್ಮ ಮೇಲಧಿಕಾರಿಗಳಿಗೆ ಕೆಲಸದ ಬಗ್ಗೆ ವರದಿ ನೀಡುತ್ತೀರಿ. ಅವರ ಮೆಚ್ಚುಗೆಯನ್ನು ಪಡೆಯುತ್ತೀರಿ. ಪರಿಣಾಮಕಾರಿಯಾದ ಕಾರ್ಯ ವೈಖರಿಯನ್ನು ಮೆಚ್ಚಿಕೊಳ್ಳುತ್ತಾರೆ.

ಶುಭದಿನ 5. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ಉತ್ತಮ ಹೆಸರು ಮಾಡಲು ಅವಕಾಶಗಳು ದೊರೆಯುತ್ತವೆ. ನಿಮ್ಮ ಜನಪ್ರಿಯತೆ ಕೂಡ ಹೆಚ್ಚಾಗಲಿದೆ. ವಿದ್ಯಾರ್ಥಿಗಳು ಹೆಚ್ಚು ವ್ಯಾಸಂಗ ಮಾಡಿ, ಅಂದುಕೊಂಡ ಗುರಿಯನ್ನು ತಲುಪಲಿದ್ದೀರಿ. ಕೋರ್ಟ್ ವ್ಯಾಜ್ಯಗಳು ನಡೆಯುತ್ತಿದ್ದಲ್ಲಿ ಹೆಚ್ಚಿನ ಹಣ ಖರ್ಚು.

ಶುಭದಿನ 5. ಸಂಕಷ್ಟಹರ ಮಹಾಗಣಪತಿ ಪೂಜೆ ಮಾಡಿರಿ.




ಅಂದುಕೊಂಡ ವೇಗದಲ್ಲಿ ಸಂಪತ್ತು ವೃದ್ಧಿ ಆಗುತ್ತಿಲ್ಲ ಎಂಬ ಚಿಂತೆ. ಈ ಅವಧಿಯಲ್ಲಿ ನಿಮಗೆ ಜನ ಬೆಂಬಲ ಸಿಗುತ್ತದೆ. ನಿಮ್ಮ ವಿಶ್ವಾಸಾರ್ಹತೆಯನ್ನು ನಾಶ ಮಾಡುವುದಕ್ಕೆ ವಿರೋಧಿಗಳು ಪ್ರಯತ್ನ ಪಡುತ್ತಾರೆ. ಆರೋಗ್ಯದಲ್ಲಿ ಸಮಸ್ಯೆ ಆಗಬಹುದು.

ಶುಭದಿನ 7. ಚಂಡಿ ಪಾರಾಯಣ ಮಾಡಿರಿ.




ವಾರದ ಶುರುವಿನಲ್ಲಿ ದೂರ ಪ್ರಯಾಣ ಮಾಡಬೇಕಾಗುತ್ತದೆ. ಕೆಲಸ ಮಾಡುವ ನಿಮ್ಮ ಸಾಮರ್ಥ್ಯ ನಿರಂತರವಾಗಿ ಹೆಚ್ಚಾಗುತ್ತದೆ. ಈ ಅವಧಿಯಲ್ಲಿ ನಿಮ್ಮ ಆರೋಗ್ಯ ಅಷ್ಟೇನೂ ಉತ್ತಮವಾಗಿ ಇರುವುದಿಲ್ಲ.

ಶುಭದಿನ 6. ಗಣೇಶ ಪಂಚರತ್ನ ಸ್ತೋತ್ರ ಪಠಿಸಿರಿ.




ವಾರದ ಶುರುವಿನಿಂದಲೇ ಅಂದುಕೊಂಡ ಯೋಜನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತದೆ. ಕೆಲಸಗಳಲ್ಲಿ ಆಗುತ್ತಿರುವ ಪ್ರಗತಿ ಬಗ್ಗೆ ತೃಪ್ತಿ ಮೂಡುತ್ತದೆ. ಪರಿಣಾಮಕಾರಿಯಾದ ಕಾರ್ಯ ವೈಖರಿಯನ್ನು ಮೆಚ್ಚಿಕೊಳ್ಳುತ್ತಾರೆ.

ಶುಭದಿನ 3. ವಿಷ್ಣು ಸಹಸ್ರನಾಮ ಪಠಿಸಿರಿ.




ಆದಾಯದಲ್ಲಿ ಹೆಚ್ಚಳ. ಜೀವನ ಮಟ್ಟ ಉತ್ತಮಗೊಳ್ಳಲಿದೆ. ಈ ವಾರ ಕೆಲವು ಉಪಯುಕ್ತ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಸಾಧ್ಯವಾಗುತ್ತದೆ. ಕೆಲವು ಸಂಗತಿಗಳಲ್ಲಿ ವೇಗವನ್ನು ತರುವುದು ಸವಾಲಾಗಿ ಪರಿಣಮಿಸಲಿದೆ.

ಶುಭದಿನ 4. ಶಿವಕವಚ ಪಠಣ ಮಾಡಿರಿ.

DHEEPAM
LAMP OIL
BLEND OF 5 OILS
ದೀಪದ ಬೆಳಕಲ್ಲಿ
ಒಂದು ದೈವೀಕ
ಅನುಭವ
ಸುಗಂಧ ಸುವಾಸನೆ
ಹರಡುವ ಪಂಚ ದೀಪ ಎಣ್ಣೆ
